# ಹುಟ್ಟುಹಬ್ಬ ಆಚರಿಸುವುದರ ವಿಧಿ

حكم الاحتفال بعيد ميلاد الشخص

< كنادي – Kannada – ಕನ್ನಡ >


## ಮುಹಮ್ಮದ್ ಸಾಲಿಹ್ ಅಲ್‌ಮುನಜ್ಜಿದ್

محمد صالح المنجد

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ಪರಿಶೀಲನೆ: ಹಸೈನಾರ್ ಸ್ವಲಾಹಿ

ترجمة: محمد حمزة البتوري

مراجعة: حسينار الصلاحي

# ಹುಟ್ಟುಹಬ್ಬ ಆಚರಿಸುವುದರ ವಿಧಿ

ಪ್ರಶ್ನೆ ಸಂಖ್ಯೆ: 1027

ಒಬ್ಬ ವ್ಯಕ್ತಿ ಪ್ರತಿವರ್ಷ ಅಥವಾ ಎರಡು ವರ್ಷಕ್ಕೊಮ್ಮೆ ತನ್ನ ಹುಟ್ಟುಹಬ್ಬವನ್ನು ಆಚರಿಸುವುದರ ವಿಧಿಯೇನು? ಮೋಂಬತ್ತಿ ಆರಿಸುವುದರ ವಿಧಿಯೇನು? ಇಂತಹ ಹುಟ್ಟುಹಬ್ಬದ ಔತಣಗಳಿಗೆ ಹಾಜರಾಗುವುದರ ವಿಧಿಯೇನು? ಇಂತಹ ಔತಣಗಳಿಗೆ ಕರೆದರೆ ಅದರಲ್ಲಿ ಪಾಲ್ಗೊಳ್ಳಬಹುದೇ? ದಯವಿಟ್ಟು ತಿಳಿಸಿರಿ. ಅಲ್ಲಾಹು ನಿಮಗೆ ಸೂಕ್ತ ಪ್ರತಿಫಲ ನೀಡಲಿ.

ಉತ್ತರ:

ಸರ್ವಸ್ತುತಿ ಅಲ್ಲಾಹನಿಗೆ ಮೀಸಲು.

ಕುರ್‌ಆನ್ ಮತ್ತು ಸುನ್ನತ್ತಿನಲ್ಲಿರುವ ಶರಈ ಪುರಾವೆಗಳು ಸೂಚಿಸುವ ಪ್ರಕಾರ ಹುಟ್ಟುಹಬ್ಬವನ್ನು ಆಚರಿಸುವುದು ಧರ್ಮದಲ್ಲಿ ನೂತನವಾಗಿ ನಿರ್ಮಿಸಲಾದ ಒಂದು ಬಿದ್‌ಅತ್ ಆಗಿದೆ. ಪರಿಶುದ್ಧ ಶರೀಅತ್ತಿನಲ್ಲಿ ಅದಕ್ಕೆ ಯಾವುದೇ ಪುರಾವೆಯಿಲ್ಲ. ಹುಟ್ಟುಹಬ್ಬದ ಔತಣಗಳ ಕರೆಯನ್ನು ಸ್ವೀಕರಿಸುವುದಕ್ಕೆ ಅನುಮತಿಯಿಲ್ಲ. ಯಾಕೆಂದರೆ ಹುಟ್ಟುಹಬ್ಬದ ಔತಣಗಳಲ್ಲಿ ಪಾಲ್ಗೊಂಡರೆ ಅದು ಆ ಬಿದ್‌ಅತ್‌ಗೆ ಬೆಂಬಲ ಕೊಟ್ಟಂತಾಗುತ್ತದೆ ಮತ್ತು ಪ್ರೋತ್ಸಾಹಿಸಿದಂತಾಗುತ್ತದೆ. ಅಲ್ಲಾಹು ಸುಬ್‌ಹಾನಹು ವತಆಲಾ ಹೇಳುತ್ತಾನೆ:

﴿ أَمۡ لَهُمۡ شُرَكَٰٓؤُاْ شَرَعُواْ لَهُم مِّنَ ٱلدِّينِ مَا لَمۡ يَأۡذَنۢ بِهِ ٱللَّهُۚ ﴾ [الشورى : 21] .

"ಅಲ್ಲಾಹು ಅನುಮತಿ ನೀಡದ ವಿಷಯಗಳನ್ನು ಧರ್ಮವನ್ನಾಗಿ ಮಾಡಿಕೊಡುವ ಯಾವುದಾದರೂ ಸಹಭಾಗಿಗಳು ಅವರಿಗಿದ್ದಾರೆಯೋ?" [ಕುರ್‌ಆನ್ 42:21]

﴿ ثُمَّ جَعَلۡنَٰكَ عَلَىٰ شَرِيعَةٖ مِّنَ ٱلۡأَمۡرِ فَٱتَّبِعۡهَا وَلَا تَتَّبِعۡ أَهۡوَآءَ ٱلَّذِينَ لَا يَعۡلَمُونَ ١٨ إِنَّهُمۡ لَن يُغۡنُواْ عَنكَ مِنَ ٱللَّهِ شَيۡـٔٗاۚ وَإِنَّ ٱلظَّٰلِمِينَ بَعۡضُهُمۡ أَوۡلِيَآءُ بَعۡضٖۖ وَٱللَّهُ وَلِيُّ ٱلۡمُتَّقِينَ ١٩ ﴾ [الجاثية : 18-19]

"(ಓ ಪ್ರವಾದಿಯವರೇ!) ತರುವಾಯ ತಮ್ಮನ್ನು ನಾವು (ಧಾರ್ಮಿಕ) ವಿಷಯದಲ್ಲಿ ಒಂದು ಸ್ಪಷ್ಟ ಮಾರ್ಗದಲ್ಲಿ ಮಾಡಿದೆವು. ಆದ್ದರಿಂದ ತಾವು ಅದನ್ನು ಅನುಸರಿಸಿರಿ. ಅರಿವಿಲ್ಲದವರ ದೇಹೇಚ್ಛೆಗಳನ್ನು ತಾವು ಅನುಸರಿಸದಿರಿ. ಅಲ್ಲಾಹನಿಗೆ ವಿರುದ್ಧವಾಗಿ ಯಾವುದೇ ವಿಷಯದಲ್ಲೂ ಅವರು ತಮಗೆ ಸ್ವಲ್ಪವೂ ಪ್ರಯೋಜನಪಡಲಾರರು. ಖಂಡಿತವಾಗಿಯೂ ಅಕ್ರಮಿಗಳಲ್ಲಿ ಕೆಲವರು ಇತರ ಕೆಲವರ

ರಕ್ಷಕರಾಗಿರುವರು. ಆದರೆ ಅಲ್ಲಾಹು ಭಯಭಕ್ತಿ ಪಾಲಿಸುವವರ ರಕ್ಷಕನಾಗಿರುವನು.” [ಕುರ್‌ಆನ್ 45:18–19]

﴿ ٱتَّبِعُواْ مَآ أُنزِلَ إِلَيۡكُم مِّن رَّبِّكُمۡ وَلَا تَتَّبِعُواْ مِن دُونِهِۦٓ أَوۡلِيَآءَۗ قَلِيلٗا مَّا تَذَكَّرُونَ ٣ ﴾

[الأعراف : 3]

“ನಿಮ್ಮ ರಬ್ಬಿನ ವತಿಯಿಂದ ನಿಮ್ಮೆಡೆಗೆ ಅವತೀರ್ಣಗೊಂಡಿರುವುದನ್ನು ನೀವು ಅನುಸರಿಸಿರಿ. ಅವನ ಹೊರತು ಅನ್ಯ ರಕ್ಷಕರನ್ನು ಅನುಸರಿಸದಿರಿ. ನೀವು ಸ್ವಲ್ಪವೇ ಚಿಂತಿಸಿ ಅರ್ಥಮಾಡಿಕೊಳ್ಳುತ್ತಿರುವಿರಿ.” [ಕುರ್‌ಆನ್ 7:3]

ಪ್ರವಾದಿಯವರು(ﷺ) ಹೇಳಿದರು:

{ مَنْ عَمِلَ عَمَلًا لَيْسَ عَلَيْهِ أَمْرُنَا فَهُوَ رَدٌّ } رواه مسلم

“ನಮ್ಮ ಆಜ್ಞೆಯಿಲ್ಲದ ಒಂದು ಕಾರ್ಯವನ್ನು ಯಾರಾದರೂ ಮಾಡಿದರೆ ಅದು ತಿರಸ್ಕೃತವಾಗಿದೆ.” [ಮುಸ್ಲಿಂ]

ಪ್ರವಾದಿಯವರು(ﷺ) ಹೇಳಿದರು:

{ خَيْرُ الْحَدِيثِ كِتَابُ اللهِ وَخَيْرُ الْهَدْيِ هَدْيُ مُحَمَّدٍ صَلَّى اللهُ عَلَيْهِ وَسَلَّمَ وَشَرُّ الْأُمُورِ مُحْدَثَاتُهَا وَكُلُّ بِدْعَةٍ ضَلَالَةٌ } رواه مسلم

“ಮಾತುಗಳಲ್ಲಿ ಅತ್ಯುತ್ತಮವಾಗಿರುವುದು ಅಲ್ಲಾಹನ ಗ್ರಂಥದಲ್ಲಿರುವ ಅವನ ಮಾತುಗಳು. ಚರ್ಯೆಗಳಲ್ಲಿ ಅತ್ಯುತ್ತಮವಾಗಿರುವುದು ಪ್ರವಾದಿ ಮುಹಮ್ಮದ್(ﷺ)ರವರ ಚರ್ಯೆ. ಕಾರ್ಯಗಳಲ್ಲಿ ಅತಿ ನಿಕೃಷ್ಟವಾಗಿರುವುದು ಹೊಸ ಹೊಸ ಆಚರಣೆಗಳು. ಎಲ್ಲ ಹೊಸ ಆಚರಣೆಗಳೂ ಬಿದ್‌ಅತ್ ಆಗಿವೆ. ಎಲ್ಲ ಬಿದ್‌ಅತ್‌ಗಳೂ ಪಥಭ್ರಷ್ಟತೆಗಳಾಗಿವೆ.” [ಮುಸ್ಲಿಂ]

ಇದೇ ಅರ್ಥವನ್ನು ಹೊಂದಿರುವ ಅನೇಕ ಹದೀಸ್‌ಗಳನ್ನು ಕಾಣಬಹುದು.

ಹುಟ್ಟುಹಬ್ಬದ ಆಚರಣೆ ನಿಷಿದ್ಧ ಬಿದ್‌ಅತ್ ಮತ್ತು ಧರ್ಮದಲ್ಲಿ ಯಾವುದೇ ಆಧಾರವಿಲ್ಲದ ಆಚರಣೆಯಾಗಿರುವುದರ ಜೊತೆಗೆ, ಯಹೂದಿಗಳ ಮತ್ತು ಕ್ರೈಸ್ತರ ಅನುಕರಣೆಯೂ ಆ ಆಚರಣೆಯಲ್ಲಿದೆ. ಯಹೂದಿಗಳ ಮತ್ತು ಕ್ರೈಸ್ತರ ಚರ್ಯೆಗಳನ್ನು ಹಿಂಬಾಲಿಸುವುದರ ಬಗ್ಗೆ ಎಚ್ಚರಿಕೆ ನೀಡುತ್ತಾ ಪ್ರವಾದಿ(ﷺ)ರವರು ಹೇಳುತ್ತಾರೆ:

{ لَتَتَّبِعُنَّ سَنَنَ مَنْ قَبْلَكُمْ شِبْرًا بِشِبْرٍ وَذِرَاعًا بِذِرَاعٍ حَتَّى لَوْ سَلَكُوا جُحْرَ ضَبٍّ لَسَلَكْتُمُوهُ } قَالُوا: يَا رَسُولَ اللَّهِ ، الْيَهُودَ وَالنَّصَارَى؟ قَالَ: { فَمَنْ؟ } رواه البخاري ومسلم

“ನೀವು ನಿಮಗಿಂತ ಮುಂಚಿನವರ ಚರ್ಯೆಗಳನ್ನು ಗೇಣಿಗೆ ಗೇಣಾಗಿ, ಮೊಳಕ್ಕೆ ಮೊಳವಾಗಿ ಹಿಂಬಾಲಿಸುವಿರಿ. ಎಲ್ಲಿಯ ತನಕ ಎಂದರೆ ಅವರೊಂದು ಓತಿಯ ಬಿಲವನ್ನು ಪ್ರವೇಶಿಸಿದರೆ ನೀವೂ ಅದನ್ನು ಪ್ರವೇಶಿಸುವಿರಿ.” ಆಗ ಸಹಾಬಾಗಳು ಕೇಳಿದರು: “ಓ ಅಲ್ಲಾಹನ ರಸೂಲರೇ! ಅವರು ಯಹೂದ ಮತ್ತು ಕ್ರೈಸ್ತರೋ?” ಪ್ರವಾದಿ(ﷺ) ಹೇಳಿದರು: “ಅವರಲ್ಲದೆ ಮತ್ತಿನ್ಯಾರು?” [ಅಲ್‌ಬುಖಾರಿ ಮತ್ತು ಮುಸ್ಲಿಂ]

ಪ್ರವಾದಿ(ﷺ) ಹೇಳಿದರು:

{ مَنْ تَشَبَّهُ بِقَوْمٍ فَهُوَ مِنْهُمْ } رواه أبو داود

“ಯಾರಾದರೂ ಇನ್ನೊಂದು ಕೋಮಿನ ಜನರನ್ನು ಅನುಕರಿಸಿದರೆ ಅವರು ಆ ಕೋಮಿನವರಲ್ಲಿ ಸೇರಿದವರಾಗುವರು.” [ಅಬೂ ದಾವೂದ್]

[ಫತಾವಾ ಇಸ್ಲಾಮಿಯ್ಯಃ 1/115]

وَصَلَّى اللهُ وَسَلَّمَ عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********

IslamHouse.com